ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯು ಮುಂದೆ ಮಂಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು).— ಲಿಖಿತ ಮೂಲಕ ಉತ್ತರಿಸುವ ಹತ್ತನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿರುವ ಹತ್ತಿ ಗಿರಣಿಗಳ ಬಗ್ಗೆ.

೫೭೧. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕೈಗಾರಿಕಾ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತಿ ಗಿರಣಿಯನ್ನು ತೆರೆಯಲು ಸಾರ್ವಜನಿಕರಲ್ಲಿಂದಾದರೂ ಮನವಿ ಬಂದಿದ್ದಾರೆಯೇ ?

ಇ) ಇದ್ದಲ್ಲಿ ಇವುಗಳು ಯಾವ ಹಂತದಲ್ಲಿ ಇವೆ ಮತ್ತು ಈ ಹತ್ತಿ ಗಿರಣಿಗೆ ನಿಯೋಜಿತ ಬಂಡವಾಳವನ್ನು ಸರ್ಕಾರದವರು ಹೂಡಿದ್ದಾರೆಯೇ ?

ಶ್ರೀ ಆರ್.ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರಗಳ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ನೊಂದಾಯಿಸಿದ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಒಟ್ಟು ೧೮. ಇವುಗಳ ಪೈಕಿ ೭ ಕಾರ್ಯನಿರ್ವಹಿಸುತ್ತಿವೆ.

ಆ) ಸಹಕಾರಿ ಕ್ಷೇತ್ರದಲ್ಲಿ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನೊಳಗೊಂಡಂತೆ ''ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ ನಿಯಮಿತ ಚನ್ನಗಿರಿ'' ಇದು ದಿನಾಂಕ ೧೧-೬-೧೯೮೪ ರಂದು ನೊಂದಾಯಿಸಲ್ಪಟ್ಟಿದೆ.

ಇ) ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇಕಡಾ ೧೦೦ ರಷ್ಟು ರಫ್ತು ಘಟಕ ಯೋಜನೆಯಲ್ಲಿ ತಯಾರಿಸಿದ ನೂಲಿಗೆ ಬೇಡಿಕೆ ಇರುವುದರಿಂದ ರೂ. ೧೫೦೦-೦೦ ಲಕ್ಷಗಳ ವೆಚ್ಚದ ''ಶೇಕಡಾ ೧೦೦ ರಷ್ಟು ರಫ್ತು ಘಟಕ ಯೋಜನೆ'' ಯನ್ವಯ ಗಿರಣಿಯನ್ನು ಆರಂಭಿಸಲು ಪ್ರಸ್ತಾಪ ಬಂದಿದ್ದು ಸರ್ಕಾರ ದಿನಾಂಕ ೧೮-೮-೮೭ರಂದು ಈ ಯೋಜನಾ ರೀತ್ಯಾ ಈ ಗಿರಣಿಗೆ ಲೈಸೆನ್ಸ್ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಯಾವುದೇ ರೀತಿಯ ಬಂಡವಾಳವನ್ನು ಸರ್ಕಾರ ಇಲ್ಲಿಯವರೆಗೆ ಮಾಡಿಲ್ಲ.

ಅಭಾವ ಕಾವಂಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಂದ ಹಣ

೫೭೭. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫, ೮೫-೮೬ ಮತ್ತು ೮೬-೮೭ನೇ ಸಾಲಿನಲ್ಲಿ ಅಭಾವ ಪರಿಹಾರ ಕಾವಂಗಾರಿಗಾಗಿ ಬಂದ ಹಣವೆಷ್ಟು ?

ಆ) ಈ ಮೇಲಿನ ವರ್ಷಗಳಲ್ಲಿ ಜಿಲ್ಲಾವಾರು ಖರ್ಚು ಮಾಡಿರುವ ಹಣವೆಷ್ಟು?

ಇ) ಕೇಂದ್ರ ಸರ್ಕಾರದಿಂದ ಹಣವು ಅನುದಾನ ರೂಪದಲ್ಲಿ ಬಂದಿದೆಯೆ ? ಅಥವಾ ಸಾಲದ ರೂಪದಲ್ಲಿ ಬಂದಿದೆಯೆ ? ಎಂಬುದನ್ನು ಸರ್ಕಾರದವರು ತಿಳಿಸುವರೆ ?